SC No.71/2022
CW-18 / PW-16

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 71/2022

ಚಾ.ಸಾಃ 18 ಪ್ರಾ.ಸಾಃ 16

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 05.01.2026

| | | |
|---|---|---|
| ಸಾಕ್ಷಿಯ ಹೆಸರು | : | ಗೋವಿಂದರಾಜ್ |
| ತಂದೆಯ ಹೆಸರು | : | ಸುಬ್ಬರಾವ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಮಾನ್ವಿ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಆರ್.ಜಿ. ಕ್ಯಾಂಪಿನಲ್ಲಿ ಕೆ.ರಾಮಕೃಷ್ಣ ಇವರಿಂದ ಯಾವುದೇ ಜಮೀನು ಖರೀದಿ ಮಾಡಿಲ್ಲ. 7, 8 ನೇ ಆರೋಪಿತರು ನನಗೆ ಗೊತ್ತಿಲ್ಲ. 7 ನೇ ಆರೋಪಿ ನಮ್ಮ ಜಮೀನಿನಲ್ಲಿರುವ ಶೆಡ್ಡಿನಲ್ಲಿ ಸ್ಫೋಟಕಗಳನ್ನು ಸಂಗ್ರಹ ಮಾಡಿದ್ದು ನನಗೆ ಗೊತ್ತಿಲ್ಲ. ಪೋಲಿಸರು ಅವುಗಳನ್ನು ತೆಗೆದುಕೊಂಡು ಹೋಗಿದ್ದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಸಲಾಯಿತು)

**ಮಾನ್ಯ ಸರಕಾರಿ ಅಭಿಯೋಜಕರಿಂದ ಪಾಟೀ ಸವಾಲುಃ-**

02. ಸರ್ವೆ ನಂ.138/7 ರಲ್ಲಿ ಆರ್.ಜಿ. ಕ್ಯಾಂಪಿನಲ್ಲಿರುವ ಜಮೀನು ನಾನು ಕೆ.ರಾಮಕೃಷ್ಣ ಇವರಿಂದ ಖರೀದಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಜಮೀನು ನನ್ನ ಹೆಸರಿಗೆ ವರ್ಗಾವಣೆ ಆಗಿರಲಿಲ್ಲ

ಎನ್ನುವುದು ಸರಿಯಲ್ಲ. ಸದರಿ ಜಮೀನು ನನ್ನ ಸ್ವಾಧೀನದಲ್ಲಿ ಇತ್ತು ಎನ್ನುವುದು ಸರಿಯಲ್ಲ. ಸದರಿ ಜಮೀನಿನಲ್ಲಿ ಒಂದು ಶೆಡ್ಡು ಇತ್ತು ಎನ್ನುವುದು ಸರಿಯಲ್ಲ. 7 ನೇ ಆರೋಪಿತನು ಕೃಷಿ ಸಲಕರಣೆಗಳನ್ನು ಇಡುವುದಕ್ಕಾಗಿ ಸದರಿ ಶೆಡ್ಡನ್ನು ಬಾಡಿಗೆಗೆ ಪಡೆದಿದ್ದನು ಎನ್ನುವುದು ಸರಿಯಲ್ಲ. 7, 8 ನೇ ಆರೋಪಿತರು ರಾತ್ರಿ ವೇಳೆಯಲ್ಲಿ ಸದರಿ ಶೆಡ್ಡಿಗೆ ಬರುತ್ತಿದ್ದರು ಎನ್ನುವುದು ಸರಿಯಲ್ಲ.

03. ದಿನಾಂಕ 22.03.2021 ರಂದು ದಾವಣಗೇರಾ ಗ್ರಾಮೀಣ ಪೋಲಿಸರು 7 ನೇ ಆರೋಪಿತನನ್ನು ಕರೆದುಕೊಂಡು ಬಂದು ಸದರಿ ಶೆಡ್ಡಿನಲ್ಲಿ ಆತನು ಇಟ್ಟಿದ್ದ ಸ್ಫೋಟಕಗಳನ್ನು ವಶಪಡಿಸಿಕೊಂಡರು ಎನ್ನುವುದು ಸರಿಯಲ್ಲ. ಈಗ ಓದಿ ಹೇಳಿದ ಪ್ರಕಾರ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ.**25 ಎಂದು ಗುರುತಿಸಲಾಯಿತು.

04. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎನ್ನುವುದು ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.